## ಚಹ, ಕಾಫಿಗೆ ಪರ್ಯಾಯ

# ತಾರಿಕೆ

■ ಎಸ್. ಓಂಕಾರಯ್ಯ ತವನಿಧಿ

ತಾರಿಕೆ/ತಂಗಟೆ ಸಸ್ಯವು ಉಷ್ಣವಲಯದ ಸಾಮಾನ್ಯ ಎತ್ತರದ ಪೊದೆ ಮಾದರಿ ಸಸ್ಯ. ಕ್ಯಾಸಿಯ ಆರಿಕ್ಯುಲೇಟ ಎನ್ನುವುದು ಇದರ ವೈಜ್ಞಾನಿಕ ಹೆಸರು. ಮಳೆ ಅಭಾವವನ್ನು ತಡೆದುಕೊಳ್ಳುವ ಈ ಸಸ್ಯ ಕಾಡು ಸಸ್ಯದಂತೆ ಎಲ್ಲೆಂದರಲ್ಲಿ ಬೆಳೆಯುತ್ತದೆ. ಯಾವುದೇ ಸಸ್ಯಾಹಾರಿ ಪ್ರಾಣಿಗಳಿಗೆ ಇದು ಆಹಾರ ಅಲ್ಲವಾದ್ದರಿಂದ ಸೊಂಪಾಗಿ ಬೆಳೆಯುತ್ತದೆ. ಚಳಿಗಾಲದಲ್ಲಿ ಮೈತುಂಬ ಹಳದಿ ಹೂ ಗೊಂಚಲನ್ನು ಬಿಟ್ಟು ದಾರಿಹೋಕರನ್ನು ತನ್ನೆಡೆಗೆ ಸೆಳೆಯುತ್ತದೆ. ಬಂಗಾರದ ಶುದ್ಧತೆ ಮತ್ತು ಬಣ್ಣ ಪರೀಕ್ಷೆಗೆ ಇದರ ಹೋಲಿಕೆ ಮಾಡುತ್ತಿದ್ದರು! ಇದು ಬಹುವಾರ್ಷಿಕ ಸಸ್ಯ.

ಇದರ ಬೇರು, ಕಾಂಡ, ಎಲೆ, ಹೂ, ತೊಗಟೆಗಳೆಲ್ಲ ತುಂಬ ಪ್ರಯೋಜನಕಾರಿ.

★ ಕಾಂಡದ ಮೇಲಿನ ಚೆಕ್ಕೆಯನ್ನು ಬಣ್ಣದ ತಯಾರಿಕೆಯಲ್ಲಿ, ಚರ್ಮ ಹದ ಮಾಡುವಿಕೆಯಲ್ಲಿ ಬಳಸುತ್ತಾರೆ.

★ ಹೂವಿನ ದಳಗಳನ್ನು ಕಷಾಯ ಮಾಡಿ, ಹಾಲು, ಬೆಲ್ಲ ಸೇರಿಸಿ ಕುಡಿಯುವುದರಿಂದ, ವಾಯು ಪ್ರಕೋಪ (ಗ್ಯಾಸ್ಟ್ರಿಕ್), ಮಲಬದ್ಧತೆ, ಅಜೀರ್ಣತೆಗಳು ಶೀಘ್ರವಾಗಿ ಶಮನವಾಗುತ್ತವೆ.

★ ಇದರ ಸೊಪ್ಪನ್ನು ಹೊಟ್ಟೆನೋವಿರುವ ಭಾಗಕ್ಕೆ ಕಟ್ಟಿಕೊಂಡು ಮಲಗಿದರೆ ನೋವು ನಿವಾರಣೆಯಾಗುತ್ತದೆ.

★ ಇದರ ಸೊಪ್ಪಿನಲ್ಲಿ ಬಲಿತ ಬಾಳೆ ಕಾಯಿಗಳನ್ನು ಒತ್ತಿ ಇಟ್ಟರೆ ಎರಡೇ ದಿನದಲ್ಲಿ ಹಣ್ಣಾಗುತ್ತವೆ.

★ ಇದರ ಹೂ ದಳಗಳಿಂದ ಮಾಡಿದ ತಂಬುಳಿ ಸ್ವಾದಿಷ್ಟ.

★ ಹಾಲು ಬೆರೆಸದ ಇದರ ಹೂ ದಳಗಳ ಕಷಾಯ ಕಫ ಹರ. ಶೀತನಿವಾರಕವೂ ಹೌದು.

★ ಇದರ ಸೊಪ್ಪಿನಲ್ಲಿ ಹೆಚ್ಚು ಸಾರಜನಕವಿದೆ. ಭತ್ತದ ಕೆಸರುಗದ್ದೆಗಳಿಗೆ ಹಸಿರೆಲೆ ಗೊಬ್ಬರದಂತೆಯೂ ಬಳಸುತ್ತಾರೆ.

★ ಪ್ರಯತ್ನಿಸಿದರೆ ಕಾಫಿ, ಟೀಗಳಿಗೆ ಇದೊಂದು ಪರ್ಯಾಯ ಪೇಯವಾಗುವುದರಲ್ಲಿ ಸಂಶಯವಿಲ್ಲ. ಕೆಲ ಸಂಸ್ಕರಣಾ ವಿಧಾನ ಅನುಸರಿಸಿ ಬೀಜದಿಂದ ಕಾಫಿ, ಎಲೆಯಿಂದ ಟೀಯನ್ನು ಪಡೆದರೆ ಇದರ ಹೂ ದಳಗಳನ್ನೇ ನೇರವಾಗಿ ಕಾಫಿ–ಟೀಯಂತೆ ಬಳಸಬಹುದು!

★ ‘ತಾರೀಕಾ‘ ಪೇಯವು ಜೀರ್ಣಕಾರಕ, ಆಯುರ್ವರ್ಧಕವೆಂದು ಜನಪದ ವೈದ್ಯಕೀಯ ನಿರೂಪಿಸಿದೆ.

ತಾನೇ ತಾನಾಗಿ ಬೆಳೆಯುವ, ಬರ ಪರಿಸ್ಥಿತಿಗಳನ್ನು ತಾಳಿಕೊಳ್ಳುವ ಈ ತಾರಿಕೆಯನ್ನು ಕೃಷಿ ಸಸ್ಯವಾಗಿ ಬೆಳೆಸುವತ್ತ, ಪರ್ಯಾಯ ಪೇಯ ಪುಡಿ (ಒಣಗಿಸಿದ ಹೂ ದಳಗಳ ಪುಡಿ) ತಯಾರಿಸುವತ್ತ ಕೃಷಿಕರು/ಉದ್ಯಮಿಗಳು ಗಮನವಹಿಸಿದರೆ ನರೋತ್ತೇಜಕವಲ್ಲದ, ಅಡ್ಡ ಪರಿಣಾಮಗಳಿಲ್ಲದ, ದೇಶೀಯ ಪೇಯ ಒಂದರ ಆವಿಷ್ಕಾರವಾಗಬಹುದು.

